ವಸ್ತುಗಳಿಗೆ ಜೀವವಿಲ್ಲವೆನ್ನುತ್ತೇವೆ. ತುಂಬಾ ಪ್ರಿಯವಾದ ವಸ್ತುಗಳು ಭಾವನಾತ್ಮಕವಾಗಿ ನಮ್ಮೊಳಗೆ ಬೆರೆತು ಹೋಗಿರುತ್ತವೆ. ಅವುಗಳಿಗೆ ಮಾತು ಬಾರದಿರಬಹುದು. ಆದರೆ ಆಘ್ರಾಣಿಸುವ ಶಕ್ತಿ ಇದೆ. ತೆರೆದ ಬಾಹುಗಳಲ್ಲಿ ಬಂಧಿಸುವ ಬಗೆ ತಿಳಿಯದಿರಬಹುದು, ಆದರೆ ಅದೆಂತಹ ಸೆಳೆತವೆಂದರೆ ಮತ್ತೆಮತ್ತೆ ಸವರಬೇಕೆಂಬ ಮತ್ತೆಮತ್ತೆ ಮುಟ್ಟಬೇಕೆಂಬ ಹಂಬಲವಂತೂ ಬರುತ್ತದೆ. ನಮ್ಮ ಕಥಾವಸ್ತು ಯಾವುದೇ ತೆಳ್ಳಗೆ ಬೆಳ್ಳಗೆ, ಬಳಕುವ ಸೌಂದರ್ಯದ ಖನಿ ಎಂದು ಖ್ಯಾತಿ ಹೊಂದಿರುವ ತರುಣಿಯಲ್ಲ ಅಥವಾ ಪ್ರೇಯಸಿಯಿಂದ ದೂರ ಸರಿದ ಪ್ರಿಯಕರನಲ್ಲ, ಒಂದು ದುಂಡಗಿರುವ ತೇಗದ ಮೇಜು. ಅದರ ವೈಭವವೆಲ್ಲಾ ಮುಗಿದು ಮೂಲೆಗುಂಪಾಗಿರುವ ಯಾರಿಗೂ ಬೇಡದಿರುವ ಕಪ್ಪು ಶರೀರದ ನಾಲ್ಕು ಕಾಲಿನ ಹಳೆಯ ಮೇಜು.

'ಇದೊಂದು ಮೇಜು ಮಾತ್ರ ಮೇಲಿನ ಅಂತಸ್ತಿನ ಆ ಮೂಲೆಗೆ ತಳ್ಳಿ, ಮಿಕ್ಕೆಲ್ಲಾ ಮೇಜುಗಳನ್ನೂ ಟೆಂಪೋದಲ್ಲಿ ತುಂಬಿ ಅವೆಲ್ಲಾ ಗುಜರಿಗೆ ಕಳಿಸಬೇಕು' ಹೊಸ ಹೋಟೆಲಿನ ವ್ಯವಸ್ಥಾಪಕ ಹುಡುಗರಿಗೆ ಆಜ್ಞೆ ನೀಡುತ್ತಿದ್ದ. ಅಂತಹ ಪ್ರತಿಷ್ಠಿತ ರಸ್ತೆಗೆ ಆ ಹಳೆಯ 'ಉಪಾಹಾರ ದರ್ಶಿನಿ' ಹೋಟೆಲು ಬಂಗಲೆಯ ಮುಂದಿನ ಗುಡಿಸಲಿನಂತೆ ಕಾಣುತ್ತಿತ್ತು. ಈಗ ಹಳೆಯ ಬೋರ್ಡು ಕೆಡವಿ, ನವೀಕರಣಗೊಂಡ ಜಾಗಕ್ಕೆ ರಂಗು ಬಳಿದು ಹಳೆಯ ಬಟ್ಟೆ ಕಳಚಿ ಹೊಸ ಅಂಗಿ ತೊಟ್ಟುಕೊಂಡಂತೆ ನಿಗಿನಿಗಿ ಹೊಳೆಯುತ್ತಿದೆ ಆ ಹೊಸ ರೆಸ್ಟೋರೆಂಟು. ಹೊರಗೆ ಕಣ್ಣು ಕುಕ್ಕುವ ವಿದ್ಯುತ್ ದೀಪಗಳಾದರೆ, ಒಳಗೆ ಬಣ್ಣಬಣ್ಣದ ಮಂದ ದೀಪಗಳು ಗೋಡೆಗೆ ನೂತನ ಕ್ಯಾನ್ವಾಸುಗಳು, ಫಳಫಳ ಹೊಳೆಯುವ ಮೇಜು- ಕುರ್ಚಿಗಳು. ಬಣ್ಣ ಬಣ್ಣದ ಕುಸುರಿ ಇರುವ ನೂತನ ತಟ್ಟೆ, ಲೋಟಗಳು. ಇಂದ್ರಲೋಕಕ್ಕಡಿಯಿಟ್ಟಂತೆ ಭಾಸವಾಗುವ ಹಾಗೆ, ಕ್ಯಾಂಡಲ್ ಲೈಟ್ ಡಿನ್ನರ್‌ಗೆ ಮೇಜಿನ ಮಧ್ಯದಲ್ಲಿ ಅಂದದ ಚಿತ್ತಾರವಿರುವ ಘಂ ಎನ್ನುವ ಕ್ಯಾಂಡಲ್ ದೀಪಗಳು. ಹೋಟೆಲಿಗೆ ಹೊಂದಿ ಕೊಂಡಂತಿರುವ ಬಾರ್. ಕೂದಲು ಜೋಲು ಬಿಟ್ಟು ಚಿತ್ರವಿಚಿತ್ರ ಬಟ್ಟೆ ತೊಟ್ಟುಕೊಂಡಿರುವ ಯುವ ವೃಂದದ ಸಂಗೀತ ವೈವಿಧ್ಯಕ್ಕಾಗಿಯೇ ಮಾಡಿಸಿರುವ ಹೊಸ ಸ್ಟೇಜು. ಕುಡಿದು ತೂರಾಡುವವರಿಗಾಗಿ ಕ್ಯಾಬರೆ ನೃತ್ಯಗಾರ್ತಿಯರ ಅರೆಬರೆ ಪ್ರದರ್ಶನಗಳಿಗಾಗಿ ಮೇಲಿನ ಅಂತಸ್ತುಗಳು ಮೀಸಲು. ಹದಿನೆಂಟು ತುಂಬಿರುವ ವಯಸ್ಕರಿಗೆ ಮಾತ್ರ ಇಲ್ಲಿ ಪ್ರವೇಶ ಎನ್ನುವ ನಾಮ್‌ಕೇವಾಸ್ತೆ ಬೋರ್ಡು. ಇನ್ನು ಮುಂದೆ ಬರುವ ಗ್ರಾಹಕರೂ ಹೊಸಬರೇ. ಖಾಲಿ ದೋಸೆ, ಮಸಾಲೆ ದೋಸೆ, ಬೈಟು ಕಾಫಿ ಕಾಲ ಮುಗಿದು ಚೈನೀಸ್, ಸ್ವೀಡಿಷ್, ಮೆಕ್ಸಿಕನ್ ಕಂಡಿರದ, ಕೇಳಿರದ ತಿಂಡಿ ತೀರ್ಥಗಳು. ಒಂದೇ ತಟ್ಟೆಯಲ್ಲಿ ಹಲವಾರು ಕೈಗಳು ಯುದ್ಧ ನಡೆಸಿ ಎಳೆದು, ಬಾಯಲ್ಲಿ ತುರುಕುವ, ಉಳಿದಿರುವ ಚೂರು ಪಾರು ಡಬ್ಬಿಯಲ್ಲಿ ತುಂಬಿಸಿ ಬ್ಯಾಗಿನೊಳಗೆ ಸೇರಿಸಿಕೊಂಡು ಮಾರನೆಯ ದಿನ ಹೊಟ್ಟೆ ಸೇರುವ ತಿಂಡಿ ತೀರ್ಥಗಳ ಕಾಲ.

ಅಂದಿನ ಮಾತು.

ಖಾಲಿ ದೋಸೆ, ಮಸಾಲೆ ದೋಸೆ, ಬೈಟು ಕಾಫಿಯ ಕಾಲ ಅದು. 'ಮಾಯಾ ಬಜಾರ್', 'ಬೇಡರ ಕಣ್ಣಪ್ಪ' ಇತ್ಯಾದಿ ಚಿತ್ರದ ಹಾಡುಗಳು, ಎಲ್.ಆರ್. ಈಶ್ವರಿಯವರ 'ಜೋ...ಕೆ ನಾನು ಬಳ್ಳಿಯ ಮಿಂಚು' ಎಂದು ಹಾಡುಗಳು ಕೇಳಿ ಬರುತ್ತಿದ್ದ, ಬಿತ್ತರಗೊಳ್ಳುತ್ತಿದ್ದ ಕಾಲ. ಇದು ತೇಗದ ದುಂಡಗಿನ ಮೇಜಾದುದರಿಂದ ಇದಕ್ಕೆ ತುಂಬಾ ಡಿಮ್ಯಾಂಡು. ಪ್ರೇಯಸಿ, ಪ್ರಿಯಕರ ಒಬ್ಬರನ್ನೊಬ್ಬರು ನೋಡುತ್ತಾ ಕೂಡಲು, ತುಂಬು ಕುಟುಂಬದಲ್ಲಿ ಗಂಡ-ಹೆಂಡತಿ ಮನಸ್ಸಿನಲ್ಲಿ ಅಡಗಿಸಿಟ್ಟುಕೊಂಡ ಮಾತುಗಳನ್ನು ಏಕಾಂತವಾಗಿ ಆಡುತ್ತಾ ಕೂಡಲು, ಗೆಳೆಯರು ಪಟ್ಟಾಂಗ ಹೊಡೆಯಲು ಈ ದುಂಡು ಮೇಜು ಹಾರ್ದಿಕ ಸ್ವಾಗತ ಕೋರುತ್ತಿತ್ತು. ಕೆಲವರಂತೂ ಅದು ಖಾಲಿಯಾಗುವುದೇ ಕಾದು ಅಲ್ಲೇ